Case called out.

## –: <u>ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ</u> :–

ವಾದಿಯು, ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ ಪ್ರತಿವಾದಿಯರು ದಾವಾ ಸ್ಥಳಗಳಲ್ಲಿ ಅವರ ಹೆಸರಿಗಿರುವ ಕ್ಷೇತ್ರವನ್ನು ಪರಭಾರೆ ಮಾಡದಂತೆ ಮತ್ತು ಸದರಿ ಕ್ಷೇತ್ರಗಳ ಮೇಲೆ ಯಾವುದೇ ಭೋಜಾ ಹೊರಿಸದಂತೆ ಮತ್ತು ದಾವಾ ಸ್ಥಳಗಳ ವಾದಿಯ ಕಬ್ಜಾ ಭೋಗ್ವಟೆಗೆ ಆತಂಕಪಡಿಸದಂತೆ , ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ವಾದಿಯು, ದಾವಾ ಸ್ಥಳಗಳ ಪ್ರಸ್ತುತ ಪಹಣಿ ಪತ್ರಿಕೆಗಳು, ನಮೂನೆ–7 ರ ಪ್ರತಿ, ನಮೂನೆ–10 ರ ಪ್ರತಿ, ಮ್ಯುಟೇಶನ್ ಎಂಟ್ರಿ ನಂ.3500 ರ ಪ್ರತಿ, ಮ್ಯುಟೇಶನ್ ಎಂಟ್ರಿ ನಂ.3993 ರ ಪ್ರತಿ, ದಿನಾಂಕ 12–04–2010 ರಲ್ಲಿ ತಹಶೀಲ್ದಾರರವರಿಗೆ ನೀಡಿದ ಅರ್ಜಿ ಪ್ರತಿಯನ್ನು, ದಿನಾಂಕ 28–05–2010 ರಲ್ಲಿ ಭಟ್ಕಳ ಸಹಾಯಕ ಕಮೀಷನರವರಿಗೆ ನೀಡಿದ ಅರ್ಜಿ ಪ್ರತಿಯನ್ನು, ಹನುಮಂತ ಗೌಡರವರ ಮರಣ ಪ್ರಮಾಣ ಪತ್ರವನ್ನು, ಮ್ಯುಟೇಶನ್ ರಿಜಿಸ್ಟರ್ ನಂ.ಎಚ್–20, ಮ್ಯುಟೇಶನ್ ಎಂಟ್ರಿ ನಂ.ಎಚ್–41 ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ವಾದವನ್ನು ಆಲಿಸಲಾಯಿತು ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ, ಸದರಿ ದಾಖಲೆಯ ಕಬ್ಜಾ ಕಾಲಂನಲ್ಲಿ ವಾದಿ ಹಾಗೂ ಪ್ರತಿವಾದಿಯರ ಹೆಸರುಗಳು ಜಂಟಿಯಾಗಿ ನಮೂದಾಗಿರುವುದು ಕಂಡು ಬರುತ್ತದೆ. ಅದಾಗ್ಯೂ, ನಮೂನೆ-7 ಮತ್ತು ನಮೂನೆ-10 ರ ಪ್ರತಿಯಲ್ಲಿ ಮಂಜು ಹನುಮಂತ ಗೌಡರವರ ಹೆಸರುಗಳು ಮಾತ್ರ ದಾಖಲಾಗಿದ್ದು ಕಂಡು ಬರುತ್ತದೆ. ಮ್ಯುಟೇಶನ್ ಎಂಟ್ರಿ ನಂ.3500 ದಾಖಲೆಯಲ್ಲಿ ಮಂಜು ಹನುಮಂತ ಗೌಡ ಈತನು ದಿನಾಂಕ 01-06-1991 ರಲ್ಲಿ ಮೃತರಾಗಿದ್ದರಿಂದ, ದಾವಾ ಸ್ಥಳವಾದ ಸರ್ವೇ ನಂ. 149 ಕ್ಕೆ ಸಂಬಂಧಪಟ್ಟಂತೆ ಮೃತನ ಮಗನಾದ ಹನುಮಂತ ಮಂಜು ಗೌಡರವರ ಹೆಸರು ಕಂದಾಯ ದಾಖಲೆಗಳಲ್ಲಿ ಅ.ಕು.ಮೆ., ನಾತೆಯಿಂದ ದಾಖಲಾಗಿದ್ದು ಕಂಡು ಬರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯು ಹೂಡಿದ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆಯಾಗಿದೆ ಎಂದು ಕಂಡುಬರುತ್ತದೆ. ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಭಾಗಶಃ ಪುರಸ್ಕರಿಸಲಾಗಿದೆ.

OS No.25/2025

ಪ್ರತಿವಾದಿಯರು ಅಥವಾ ಅವರ ಕಡೆಯವರು ದಾವಾ ಸ್ಥಳಗಳನ್ನು ಪರಭಾರೆ ಮಾಡದಂತೆ ಮುಂದಿನ ವಾಯಿದೆವರೆಗೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ಪ್ರತಿವಾದಿಯರಿಗೆ ಏಕಪಕ್ಷೀಯ ತಾತ್ಕಾಲಿಕ ನಿರ್ಭಂದಕಾಜ್ಞೆಯ ಪ್ರತಿ ಮತ್ತು ತುರ್ತು ನೋಟಿಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಪ್ರತಿವಾದಿಯರಿಗೆ ದಾವಾ ಸಮನ್ಸ್ ಹೊರಡಿಸಿರಿ.

ವಾದಿಯು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 3(ಎ) ಮತ್ತು (ಬಿ) ನಿಯಮಗಳನ್ನು ಪರಿಪಾಲಿಸತಕ್ಕದ್ದು.

**ಮುಂದಿನ ವಿಚಾರಣೆ ದಿನಾಂಕ** 03.03.2025.

SD/-

**ಸ. ಪ್ರ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**